**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 123 ಡಿಬಿಎಂ 2020

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ: 23.03.2020

## ಸುತ್ತೋಲೆ

**1.** ಕರ್ನಾಟಕ ರಾಜ್ಯದಲ್ಲಿ ಕೊರೊನಾ ವೈರಸ್ (ಕೋವಿಡ್-19) ಸಾಂಕ್ರಾಮಿಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಸಚಿವಾಲಯ ಸೇರಿದಂತೆ ರಾಜ್ಯಮಟ್ಟದ ಕಛೇರಿಗಳಲ್ಲಿ ಹಾಗೂ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅತ್ಯಗತ್ಯ ಸೇವೆಗಳನ್ನು ಒದಗಿಸುತ್ತಿರುವ ಇಲಾಖೆಗಳಾದ 1) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ 2) ವೈದ್ಯಕೀಯ ಶಿಕ್ಷಣ ಇಲಾಖೆ 3) ಒಳಾಡಳಿತ ಇಲಾಖೆ 4) ಕಂದಾಯ ಇಲಾಖೆ 5) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ 6) ನಗರಾಭಿವೃದ್ಧಿ 7) ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ 8) ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ 9) ಸಾರಿಗೆ 10) ಇಂಧನ ಇಲಾಖೆಗಳನ್ನು, ಹೊರತುಪಡಿಸಿ ಉಳಿದ ಎಲ್ಲಾ ಇತರೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಅಧಿಕಾರಿ/ನೌಕರರುಗಳಿಗೆ ದಿನಾಂಕ: 24.03.2020 ರಿಂದ 31.03.2020 ರವರೆಗೆ ಕಛೇರಿಗೆ ಬರುವುದರಿಂದ ವಿನಾಯಿತಿ ನೀಡಲಾಗಿದೆ.

**2.** ಈ ರೀತಿ ವಿನಾಯಿತಿ ನೀಡಲಾಗಿರುವ ಇಲಾಖೆಗಳಡಿ ಬರುವ ಮಂಡಳಿ/ನಿಗಮ/ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಅಧಿಕಾರಿ / ನೌಕರರಿಗೆ ಹಾಜರಾತಿಯಿಂದ ವಿನಾಯಿತಿ ನೀಡುವ ಬಗ್ಗೆ ಸಂಬಂಧಪಟ್ಟ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರು / ಇಲಾಖಾ ಮುಖ್ಯಸ್ಥರು ನಿರ್ಧರಿಸಬಹುದಾಗಿದೆ.

**3.** ಹಾಜರಾತಿಯಿಂದ ವಿನಾಯಿತಿ ನೀಡಲ್ಪಟ್ಟ ಎಲ್ಲಾ ಅಧಿಕಾರಿಗಳು/ನೌಕರರು ಕೇಂದ್ರ ಸ್ಥಾನದಲ್ಲಿ ಲಭ್ಯವಿರುವುದು ಹಾಗೂ ತುರ್ತು ಕಾರಣಗಳಿದ್ದಾಗ ಶೇ.25ಕ್ಕೆ ಮೀರದಂತೆ ಇಂತಹ ಅಧಿಕಾರಿ / ನೌಕರರ ಸೇವೆಯನ್ನು ಇಲಾಖೆಯ ಕಾರ್ಯದರ್ಶಿಯವರು / ಇಲಾಖಾ ಮುಖ್ಯಸ್ಥರು ಬಯಸಿದಲ್ಲಿ ಅಧಿಕಾರಿ /ನೌಕರರು ಯಾವುದೇ ಕಾರಣ ನೀಡದೇ ಕಛೇರಿಗೆ ಹಾಜರಾಗುವುದು.

...2

**4**. ಕಛೇರಿಗೆ ಹಾಜರಾಗಲು ವಿನಾಯಿತಿ ಕೋರುವ ಅಧಿಕಾರಿ/ನೌಕರರುಗಳ ಬಗ್ಗೆ ಸಂಬಂಧಿಸಿದ ಇಲಾಖಾ ಕಾರ್ಯದರ್ಶಿ / ಮುಖ್ಯಸ್ಥರು ನಿರ್ಣಯ ತೆಗೆದುಕೊಳ್ಳಬಹುದಾಗಿದೆ.

**5.** ಕಂಡಿಕೆ(01)ರಲ್ಲಿ ಉಲ್ಲೇಖಿಸಿದ ಅತ್ಯಗತ್ಯ ಸೇವೆಗಳನ್ನು ಒದಗಿಸುತ್ತಿರುವ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ವೈದ್ಯಕೀಯ ಹಾಗೂ ಇತರ ಕಾರಣಗಳಿಗಾಗಿ ದಿನಾಂಕ:31.03.2020ರವರೆಗೆ ಕಛೇರಿಗೆ ಹಾಜರಾಗಲು ವಿನಾಯಿತಿ ಬಯಸಿದಲ್ಲಿ ಅದರ ಬಗ್ಗೆ ಸಂಬಂಧಿಸಿದ ಇಲಾಖೆಯ ಕಾರ್ಯದರ್ಶಿಗಳು/ಇಲಾಖಾ ಮುಖ್ಯಸ್ಥರು ಸೂಕ್ತ ನಿರ್ಣಯ ತೆಗೆದುಕೊಳ್ಳಬಹುದಾಗಿದೆ.

(ಟಿ.ಎಂ. ವಿಜಯಭಾಸ್ಕರ್)
ಮುಖ್ಯ ಕಾರ್ಯದರ್ಶಿಗಳು
ಕರ್ನಾಟಕ ಸರ್ಕಾರ